ದಿ: 12-11-2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಆರ್.ಕೆ., ವಕೀಲರಿಂದ ಆರೋಪಿತರ ಪರವಾಗಿ:**

8. ಒಟ್ಟು ನಾನು 06 ಪಂಚನಾಮೆಗಳಿಗೆ ಸಹಿ ಮಾಡಿದ್ದೇನೆ. ಮೊದಲನೇ ಪಂಚನಾಮೆದಿಂದ ಆರನೇ ಪಂಚನಾಮೆ ಮಾಡುವವರೆಗೂ ದೂರುದಾರರ ಕೈಯಲ್ಲಿ ಹಣ ಇತ್ತು. ಸಾಕ್ಷಿದಾರರು ಹೇಳುತ್ತಾರೆ ಆ ಪಂಚನಾಮೆಯಲ್ಲಿ ಬರೆದ ನೋಟಿನ ನಂಬರ ಸರಿ ಇತ್ತು. "ನಿಮ್ಮ ಚೆಕ್ ಬಂದಿಲ್ಲ" ಅಂತ ನನಗೆ ಈಗ ತೋರಿಸಿದ ನಿಪಿ-8A ರಲ್ಲಿ ಇರುವುದಿಲ್ಲ. ಆರೋಪಿಯು "ಲಂಚದ ಹಣವನ್ನು ಕವರ್ ನಲ್ಲಿ ಇಟ್ಟು ಕೊಡಿ" ಅಂತ ಹೇಳಿದ್ದು, ನಿಪಿ-8A ರಲ್ಲಿ ಕಂಡು ಬರುವುದಿಲ್ಲ ಅಂದರೆ ನಿಜ. ಆರೋಪಿಯು ಲಂಚದ ಬೇಡಿಕೆಯೇ ಇಟ್ಟಿರುವುದಿಲ್ಲ ಹೇಗಾದರೂ ಮಾಡಿ ಅವರನ್ನು ಸಿಲುಕಿಸಲು ಕೈ ಸನ್ನೆ ಮಾಡಿದರು ಅಂತ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಮಹಜರನಲ್ಲಿ ತನಿಖಾಧಿಕಾರಿಯವರು ಆರೋಪಿಯು ಹಣವನ್ನು ಟೇಬಲ್ ಕೆಳಗಡೆ ಬಿಸಾಕಿದರು ಅಂತ ಬರೆದುಕೊಂಡಿದ್ದಾರೆ ಅಂದರೆ ಸರಿ. ಸಾಕ್ಷಿದಾರರು ಹೇಳುತ್ತಾರೆ ಪೊಲೀಸರು ಒಳಗಡೆ ಬಂದ ನಂತರ ಆರೋಪಿಯು ಹಣವನ್ನು ಟೇಬಲ್ ಕೆಳಗಡೆ ಬಿಸಾಕಿದರು. ಮಹಜರನಲ್ಲಿ ಪೊಲೀಸರು ಬಂದ ನಂತರ ಆರೋಪಿಯು ಹಣವನ್ನು ಟೇಬಲ್ ಕೆಳಗಡೆ ಬಿಸಾಕಿದ ಬಗ್ಗೆ ಬರೆಸಿಲ್ಲ. ಪೊಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿಲ್ಲ. ಅಮಿತ್ ಎಂಬುವವರ ಹೇಳಿಕೆಯನ್ನು ಪಡೆದುಕೊಂಡರು. ಚಾಸಾ-3-ಅಮಿತ್ ರವರು ಪೊಲೀಸರು ಬಂದ ನಂತರ ಆರೋಪಿಯು ಹಣವನ್ನು ಟೇಬಲ್ ಕೆಳಗಡೆ ಬಿಸಾಕಿದರು ಅಂತ ನನ್ನ ಎದುರಿಗೆ ಹೇಳಿಲ್ಲ. ಪಿರ್ಯಾದಿದಾರರು ಪೊಲೀಸರಿಗೆ ಕೈ ಸನ್ನೆ ಮಾಡಿದಾಗ ನಾನು ಪೊಲೀಸರೊಂದಿಗೆ ಇದ್ದೆ. ಆಗ ನಾನು ಪೊಲೀಸರೊಂದಿಗೆ ಹಾಸ್ಟೇಲ್ ಕಟ್ಟಡದ ಹೊರಗಡೆ 20 ಅಡಿ ಅಂತರದಲ್ಲಿದ್ದೆ.

ರಾಸಾಯನಿಕ ಪದಾರ್ಥಗಳನ್ನು ವಹಿಸುವವಿಕೆ ಪಂಚನಾಮೆ ಮಾಡುವ ಕಾಲಕ್ಕೆ ತೆಗೆದುಕೊಂಡು ಬಂದಿದ್ದನ್ನು ಟ್ರ್ಯಾಪ್ ಪಂಚನಾಮೆ ಮಾಡುವ ಕಾಲಕ್ಕೆ ತೆಗೆದುಕೊಂಡು ಬಂದಿದ್ದರಾ

ಅಂದರೆ ನಿಜ. ಹಣವನ್ನು ಇಟ್ಟಿದ್ದಂತಹ ಕವರ್ ಗೆ ಫಿನಾಪ್ತಿಲಿನ್ ಪುಡಿಯನ್ನು ಸವರಿದ್ದರೋ ಇಲ್ಲವೋ ನೆನಪಿಲ್ಲ ಹಣಕ್ಕೆ ಸವರಿರುತ್ತಾರೆ.

9. ಸಮಾಜಿಯಿಷಿಯನ್ನು ತನಿಖಾಧಿಕಾರಿಯವರು ಆರೋಪಿಯಿಂದ ಹೇಳಿ ಬರೆಸಿದರು ಅಂದರೆ ನಿಜ. ಸಾಕ್ಷಿದಾರರು ಹೇಳುತ್ತಾರೆ ಆರೋಪಿಯೇ ಬರೆದುಕೊಟ್ಟರು. ಪಿರ್ಯಾದಿದಾರರಿಂದ ಜರಾಕ್ಸ ಪ್ರತಿಗಳನ್ನು ವಶಪಡಿಸಿಕೊಂಡಿದ್ದು ಯಾವುದು ಅಂತ ನನಗೆ ಖುದ್ದಾಗಿ ಗೊತ್ತಿಲ್ಲ. ದಿಃ 05-03-2014 ರಂದು ಮರುವಹಿಸುವಿಕೆ ಪಂಚನಾಮೆ ಮಾಡಿದರು. ಆ ದಿನ ನಾವು ಹಿಂದಿರುಗಿದ ಬಗ್ಗೆ ಪುನಃ ಪಂಚನಾಮೆ ಮಾಡಿದರು. ಆ ಮರುವಹಿಸುವಿಕೆ ಪಂಚನಾಮೆಯಲ್ಲಿ ಪಂಚನಾಮೆ ಮುಂದುಡಿದ ಬಗ್ಗೆ ನಮೂದು ಮಾಡಿಲ್ಲ. ದಿಃ 05-03-2014 ರಂದು ಮತ್ತು ದಿಃ 06-03-2014 ರಂದು ಪಂಚನಾಮೆಗೆ ಹೋಗಲು ನಾನು ಮೇಲಾಧಿಕಾರಿಗಳ ಅನುಮತಿಯನ್ನು ಪಡೆದುಕೊಂಡಿರುತ್ತೇನೆ. ಆ ಅನುಮತಿಯನ್ನು ಪಡೆದಿದ್ದನ್ನು ತನಿಖಾಧಿಕಾರಿಗಳಿಗೆ ಕೊಟ್ಟಿದ್ದೆ. ನಾನು ಹೇಳಿದ ರೀತಿಯಲ್ಲಿ ಯಾವುದೇ ಪಂಚನಾಮೆಯನ್ನು ದಿಃ 05-03-2014 ರಂದು ಮಾಡಿರುವುದಿಲ್ಲ ಅಂದರೆ ಸುಳ್ಳು.

10. ಆರೋಪಿಯು ಲಂಚದ ಬೇಡಿಕೆ ಎಂದಿಗೂ ಹಾಕಿರುವುದಿಲ್ಲ ಅಂದರೆ ಸರಿಯಲ್ಲ. ಪೊಲೀಸರು ಯಾವ ರೀತಿ ಸಾಕ್ಷಿ ಹೇಳಬೇಕು ಅಂತ ನನಗೆ ನಿರ್ದೇಶವಿದ್ದು ಆ ರೀತಿ ನಾನು ಸುಳ್ಳು ಸಾಕ್ಷಿ ಕೊಡುತ್ತಿದ್ದೇನೆ ಅಂದರೆ ಸರಿಯಲ್ಲ. ಪಂಚನಾಮೆಯನ್ನು ಪೊಲೀಸರು ಹೇಳಿ ಬರೆಸಿದರಾ ಅಂದರೆ ಅವರ ಸಮ್ಮುಖದಲ್ಲಿಯೇ ಪಂಚನಾಮೆಯನ್ನು ಬರೆಯಲಾಯಿತು. ಈ ಪ್ರಕರಣದ ಬಗ್ಗೆ ಖುದ್ದಾಗಿ ನನಗೆ ಏನೂ ಗೊತ್ತಿಲ್ಲದೇ ಇದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

Spl.C.Lok.14/2014 PW-1

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.